ನಾಗರಿಕತೆಗಳ ನಡುವಿನ ಸಂಪರ್ಕಗಳ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯಕ್ಕೆ ನಾಂದಿ ಹಾಡಿ, ಪ್ರಪಂಚದಾದ್ಯಂತ ವಿಜ್ಞಾನಿಗಳ ನಡುವೆ ಬಿಸಿಬಿಸಿ ಚರ್ಚೆಯನ್ನೆ ಹುಟ್ಟುಹಾಕಿತ್ತು. ಕಾರಣ? ಈ ದೇವಾಲಯ ನಿರ್ಮಾಣವಾದದ್ದು, ಸುಮಾರು ಕ್ರಿ.ಶ. 1258ರ ಸಮಯದಲ್ಲಿ. ಜೊಹಾನ್ಸನ್ ವಾದಿಸಿದಂತೆ ಅಲ್ಲಿನ ಮೂರ್ತಿಗಳ ಕೈಗಳಲ್ಲಿರುವ ರಚನೆಗಳು ಮುಸುಕಿನ ಜೋಳವನ್ನು ಆಧರಿಸಿ ಕೆತ್ತಲ್ಪಟ್ಟ ಅದರ ಪ್ರತಿರೂಪಗಳೇ ಆಗಿದ್ದಲ್ಲಿ, ಕ್ರಿ.ಶ. 13ನೇ ಶತಮಾನದಲ್ಲಿಯೇ ಮುಸುಕಿನ ಜೋಳವು ಭಾರತದಲ್ಲಿತ್ತು ಎಂದಂತಾಗುತ್ತದೆ. ಆದರೆ ಸಸ್ಯ ವಿಜ್ಞಾನಿಗಳ ಪ್ರಕಾರ, ಮುಸುಕಿನ ಜೋಳವು ದಕ್ಷಿಣ ಅಮೆರಿಕದಲ್ಲಿ ವಿಕಾಸಗೊಂಡ ಬೆಳೆಯಾಗಿದ್ದು, ಕೊಲಂಬಸ್ ಅಮೆರಿಕವನ್ನು ಕಂಡುಹಿಡಿದ ನಂತರವೇ ಅದು ಭಾರತಕ್ಕೆ ಪ್ರವೇಶಿಸಿರಲು ಸಾಧ್ಯ. ಅಂದರೆ ಕ್ರಿ. ಶ. 1498ರ ಮುನ್ನ ಭಾರತದಲ್ಲಿ ಮುಸುಕಿನ ಜೋಳವೇ ಇರಲಿಲ್ಲ ಎನ್ನುವುದು ವಿಜ್ಞಾನಿಗಳ ವಾದವಾಗಿತ್ತು. ಹಾಗಿದ್ದಲ್ಲಿ 13ನೆ ಶತಮಾನದಲ್ಲಿ ನಿರ್ಮಿಸಲಾದ ಸೋಮನಾಥಪುರದ ದೇವಾಲಯದಲ್ಲಿ ಶಿಲ್ಪಿಗಳು ಮುಸುಕಿನ ಜೋಳದ ತೆನೆಗಳನ್ನು ಕೆತ್ತಲು ಹೇಗೆ ಸಾಧ್ಯ?

ಇದರ ಬೆನ್ನು ಹತ್ತಿದ ವೀಣಾ  ಹಲವು ಮಾಹಿತಿ ಕಲೆಹಾಕಿ ಒಂದು ವೈಜ್ಞಾನಿಕ ಪ್ರಬಂಧವನ್ನು ಪ್ರಕಟಿಸಿದ್ದಳು. ಅದರಂತೆ, ಮೂಲತಃ ಜೈನರಾಗಿದ್ದ ಹೊಯ್ಸಳರ ಕಾಲದಲ್ಲಿ ನಿರ್ಮಿಸಿಲಾದ ಸೋಮಾನಾಥಪುರದ ದೇವಾಲಯದ ಆ ಕೆತ್ತನೆಗಳು, ಕ್ರಿ. ಪೂ. ಎರಡನೇ ಶತಮಾನದಲ್ಲಿ ನಿರ್ಮಿಸಲಾಗಿದ್ದ ಉತ್ತರ ಭಾರತದ ಜೈನ ದೇಗುಲಗಳಲ್ಲಿರುವ ಕಲ್ಪವೃಕ್ಷವನ್ನು ಆಧರಿಸಿವೆ ಎಂದು ವಾದಿಸಿದ್ದಳು. ಈ ಸಂಶೋಧನೆಯು ವಿಜ್ಞಾನದ ಪ್ರಸಿದ್ಧ ನಿಯತಕಾಲಿಕೆಯಾದ 'ಕರೆಂಟ್ ಸೈನ್ಸ್'ನಲ್ಲಿ ಪ್ರಕಟವಾದ ತಕ್ಷಣ, ಹಲವು ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿದ್ದಂತೆ, ಅದರ ಬೆನ್ನಲ್ಲಿಯೇ ಆಕೆಗೊಂದು ಬೆದರಿಕೆಯ ಪತ್ರ ಬಂದಿತ್ತು: 'ಜೈನ ಧರ್ಮದ ಸೂಕ್ಷ್ಮಗಳನ್ನು ಅರಿಯದೆ ಅಂತಹ ಸಂಶೋಧನೆಗಳನ್ನು ಕೈಗೊಳ್ಳುವುದು ಆ ಧರ್ಮದ ಗೌರವಕ್ಕೆ ಧಕ್ಕೆ ತರುತ್ತದೆ. ಆದ್ದರಿಂದ ಇಂತಹ ಪ್ರಯತ್ನಗಳಿಂದ ದೂರವಿರುವುದು ಕ್ಷೇಮ' ಎಂದು! ಆ ಸದ್ಯಕ್ಕೆ ಗಂಭೀರವಾಗಿ ಪರಿಗಣಿಸದೆ ಅದನ್ನು ಬುಟ್ಟಿಗೆ ಎಸೆದಿದ್ದೆವು. ಇದಾದ ಕೆಲವೇ ತಿಂಗಳುಗಳಲ್ಲಿ ಎಡಿನ್‌ಬರೋಗೆ ಹೋಗಿದ್ದ ವೀಣಾ ಮಾನಸಿಕವಾಗಿ ಕುಂದಿ ಆಸ್ಪತ್ರೆ ಸೇರಿದ್ದಳು. ಆಕೆಯ ಸಂಶೋಧನೆಯಿಂದ ಅಸಮಾಧಾನಗೊಂಡ ಯಾರೋ ಒಬ್ಬಂಟಿಯಾಗಿದ್ದ ಆಕೆಯನ್ನು ಹೆದರಿಸಿರಬಹುದೆ? ಇದರಿಂದ ಆಕೆ ಮಾನಸಿಕವಾಗಿ ಕುಂದಿರಬಹುದೆ? ಪ್ರಯಾಣದುದ್ದಕ್ಕೂ ನನ್ನನ್ನು ಕಾಡಿದ ಇಂತಹ ಯೋಚನೆಗಳು ಒಂದು ದೀರ್ಘವಾದ ಕಲ್ಪನೆಯತ್ತ ಸೆಳೆದೊಯ್ದಿದ್ದವು. ಪರಿಣಾಮವಾಗಿ ಎಡಿನ್‌ಬರೋ ತಲುಪುವಷ್ಟರಲ್ಲಿ 'ಕನಕಮುಸುಕು'ವಿನ ಕಥಾವಸ್ತು ಕರಡು ಆಕಾರ ಪಡೆಯತೊಡಗಿತ್ತು.

## ನಿರಾಳ ಮನಸ್ಸಿನಲ್ಲಿ ಅರಳಿದ ಕಥಾಹಂದರ

ಎಡಿನ್‌ಬರೋದಲ್ಲಿ ಆಸ್ಪತ್ರೆಯಲ್ಲಿ ವೀಣಾಳನ್ನು ನೋಡಿದ ತಕ್ಷಣ ನನ್ನ ದುಗುಡವೆಲ್ಲ ಮಾಯವಾಗಿತ್ತು. ಕಾರಣ, ತನ್ನ ಒಂದು ವರ್ಷದ ಮಗಳನ್ನು ಬಿಟ್ಟುಹೋದ ಪಾಪಪ್ರಜ್ಞೆಯಿಂದಲೋ, ಮಗಳನ್ನು ಬಿಟ್ಟಿರಲಾರದ ಸಂಕಟದಿಂದಲೋ ಆಕೆ ಮಾನಸಿಕವಾಗಿ ಕುಗ್ಗಿ ಹೋಗಿದ್ದಳು. ಹಾಗಾಗಿಯೆ ನನ್ನನ್ನು ಕಂಡ ತಕ್ಷಣ ಹಾಸಿಗೆಯಿಂದ ಒಂದೆ ನೆಗೆತಕ್ಕೆ ಎದ್ದು ನನ್ನನ್ನು ತಬ್ಬಿ ಆಕೆ ಕೇಳಿದ ಮೊದಲ ಪ್ರಶ್ನೆ: 'ಪುಣ್ಯ ಎಲ್ಲಿ? ಅವಳನ್ನೇಕೆ ಕರೆತರಲಿಲ್ಲ?' ಎಂದು. 'ಅವಳನ್ನು ಬಿಟ್ಟಿರಲಾರೆ. ನನ್ನನ್ನು ಜೊತೆಯಲ್ಲಿ ಕರೆದೊಯ್ದು ಬಿಡಿ' ಎಂದು ಅವಳು